ಮೂಲ ದಾವಾ ಸಂಖ್ಯೆ 22/2021

ಪಿ ಡಬ್ಲ್ಯೂ-1

**(ದಿನಾಂಕ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಎಂ ಎಂ ಎನ್ ವಕೀಲರಿಂದಃ-**

ನಾನು ಪಿ ಯು ಸಿ ಓದಿರುತ್ತೇನೆ. ನಾನು ಈಗ ಹೊಸಪೇಟೆ ಯಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆತನದ ಮೂಲ ಪುರುಷ ಶಂಕರಸಿಂಗ್. ಶಂಕರಸಿಂಗ್ ಗೆ 3 ಗಂಡು, 4 ಹೆಣ್ಣು ಮಕ್ಕಳು. ಜಯರಾಮ ಸಿಂಗ್ ಭಗವಾನ್ ಸಿಂಗ್ ಮತ್ತು ರಾಮಚಂದ್ರ ಸಿಂಗ್. ನಮ್ಮ ತಂದೆ ಎ ಆರ್ ರಾಮಚಂದ್ರ ಸಿಂಗ್. ರಾಮಚಂದ್ರ ಸಿಂಗ್ ಗೆ 3 ಜನ ಮಕ್ಕಳು. ಬಾಲಾಜಿ ಸಿಂಗ್ ಎ ಆರ್ ವಿಜಯ ಸಿಂಗ ಎ ಆರ್ ಗಣೇಶ್ ಸಿಂಗ್. ನಾವು 3 ಜನ ಮಾತ್ರ ರಾಮಚಂದ್ರ ಸಿಂಗ್ ನವಾರಸುದಾರರು ಎಂದರೆ ಸರಿ. ಇದೆ ನ್ಯಾಯಾಲಯದಲ್ಲಿ ಓ ಎಸ್ ನಂಬರ 47/2011 ನಾನೇ ಹೂಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಲೋಕ ಅದಾಲತ್ ನಲ್ಲಿ 11.02.2016 ರಲ್ಲಿ ರಾಜಿ ಮಾಡಿಕೊಂಡಿದ್ದೆ ಎಂದರೆ ಸರಿ. ರಾಜಿ ಡಿಕ್ರಿಯಂತೆ ನನಗೆ ಬಂದ ಆಸ್ತಿಯನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ವಿಭಾಗ ಮಾಡಿಕೊಂಡ ವಿಚಾರ ಗೊತ್ತಿದ್ದರೂ ಸಹ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 124 ನನ್ನ ಅಜ್ಜಿಯ ರಾಜ್ ಪೂತ್ ಹೀರಾಬಾಯಿ ಹೆಸರಿನಲ್ಲಿ ಇದೆ. ನಮ್ಮ ತಂದೆ 3 ಜನ ಮಕ್ಕಳಿಗೂ ಹಕ್ಕು ಇದೆ ಎಂದರೆ ಸರಿ. ಸರ್ವೆ ನಂಬರ 124 ದಾವಾದಲ್ಲಿ ಸೇರಿಸಿಲ್ಲಾ. ಸರ್ವೆ ನಂಬರ 124 ದಾವಾದಲ್ಲಿ ಸೇರಿಸಿಲ್ಲದ ಕಾರಣ ದಾವಾ ಊರ್ಜಿತ ಆಗುವುದಿಲ್ಲಾ ಎಂದರೆ ಸರಿ. ಡೋರ್ ನಂಬರ 78 ಮನೆ ಜಯರಾಮ್ ಸಿಂಗ್ ಹೆಸರಿನಲ್ಲಿ ಇದೆ. ಡೋರ್ ನಂಬರ 78 ಮನೆ ದಾವಾದಲ್ಲಿ ಸೇರಿಸಿಲ್ಲಾ ಎಂದರೆ ಸರಿ. ಡೋರ್ ನಂಬರ 78 ದಾವಾದಲ್ಲಿ ಸೇರಿಸಿಲ್ಲದ ಕಾರಣ ದಾವಾ ಊರ್ಜಿತ ಆಗುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಸರಿಯಾದ ನ್ಯಾಯಾಲಯದ ಶುಲ್ಕ ಭರಿಸಿರುವುದಿಲ್ಲಾ ಎಂದರೆ

ಮೂಲ ದಾವಾ ಸಂಖ್ಯೆ 22/2021

ಪಿ ಡಬ್ಲ್ಯೂ-1

ಸರಿಯಲ್ಲ. ದಾವಾ ಈ ನ್ಯಾಯಾಲಯದಲ್ಲಿ ದಾಖಲಿಸಲು ಅಧಿಕಾರ ವ್ಯಾಪ್ತಿ ಇಲ್ಲಾ ವ್ಯಾಜ್ಯಾ ಕಾರಣ ಇಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಲ್ಲಾವನ್ನು ನಾನೇ ಸ್ವಾಧೀನದಲ್ಲಿ ಇಟ್ಟು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ಪನವನ್ನು ಜಯರಾಮ್ ಸಿಂಗ್ ಮಕ್ಕಳು ಪಡೆದುಕೊಳ್ಳುತ್ತಿದ್ದಾರೆ. ನಾನೇ ಉತ್ಪನ್ನ ಪಡೆಯುತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಣೇಶ್ ಸಿಂಗ್ ನನ್ನ ದೊಡ್ಡಪ್ಪನ ಮಗ. ಗಣೇಶ ಸಿಂಗ್ ರವರಿಗೆ ಕೊಟ್ಟ ಎಲ್ಲಾ ಆಸ್ತಿಗಳನ್ನು ನಾನು ಕಸಿದುಕೊಂಡು ಎಲ್ಲಾ ಸ್ವಾಧೀನ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಹಿಂಸೆ ಕೊಡಲು ಪದೇ ಪದೇ ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಿರಿಯ ದಿವಾಣಿ ನ್ಯಾಯಾಲಯದಲಿ ಮತ್ತೊಂದು ದಾವೆ 87/2017 ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅದರಲ್ಲಿ ಪ್ರತಿವಾದಿ ಎಂದರೆ ಸರಿ. ಅದು ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ನಾನು ಅಸ್ಪಷ್ಟ ಮಾಹಿತಿ ಕೊಟ್ಟು ದಾವಾ ಹೂಡಿರುವ ಕಾರಣ ದಾವಾ ಊರ್ಜಿತ ಆಗುವುದಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.